

# ಲ್ಯಾಬ್ ಟೆಸ್ಟ್ ಮಾಡಿಸಿದ್ರಾ?

ದೊಡ್ಡಪ್ಪನ ಮಗ 'ಅಪ್ಪ ಸ್ನಾನದ ಗೃಹದಲ್ಲಿ ಇದ್ದಕ್ಕಿದ್ದಂತೆ ಬಿದ್ದು ಮೂರ್ಛೆ ತಪ್ಪಿದ್ದಾರೆ' ಎಂದು ಫೋನ್ ಮಾಡಿದ್ದ. ಅವರ ಕುಟುಂಬವಿರುವುದು ಚಿಕ್ಕ ಊರಿನಲ್ಲಿ. ಅಲ್ಲಿನ ವೈದ್ಯರು ಪರೀಕ್ಷಿಸಿ, ಪ್ರಥಮ ಚಿಕಿತ್ಸೆ ನೀಡಿದ್ದರು. ದೊಡ್ಡಪ್ಪನಿಗೆ ಪ್ರಜ್ಞೆ ಮರುಕಳಿಸಿತ್ತು ಸಹ. ಆದರೂ ಒಮ್ಮೆ ಇಇಜಿ ಪರೀಕ್ಷೆ ಮಾಡಿಸಿ ನರರೋಗ ತಜ್ಞರ ಬಳಿ ಸಲಹೆಯನ್ನು ಪಡೆಯಲು ಸೂಚಿಸಿದ್ದರು. ಅವರ ಸಲಹೆಯಂತೆ ಮಗ ಅಪ್ಪನನ್ನು ಅರವತ್ತು ಕಿಲೋಮೀಟರ್ ದೂರದಲ್ಲಿದ್ದ ಜಿಲ್ಲಾ ಕೇಂದ್ರಕ್ಕೆ ಕರೆತಂದದ್ದೂ ಆಯಿತು. ತಜ್ಞರ ಸಲಹೆಯಂತೆ ಇಇಜಿ ಪರೀಕ್ಷೆ ಮಾಡಿಸಲು ಕರೆದೊಯ್ದರೆ, ಅಲ್ಲಿನ ಪ್ರಯೋಗಾಲಯ ತಂತ್ರಜ್ಞರು 'ತಲೆಗೂದಲಿನಲ್ಲಿ ಎಣ್ಣೆಯ ಪಸೆಯಿದೆ. ಹಾಗಾಗಿ ತಪಾಸಣೆ ಮಾಡಲು ಬರುವುದಿಲ್ಲ, ನೀವು ತಲೆಗೂದಲನ್ನು ಸ್ವಚ್ಛಗೊಳಿಸಿಕೊಂಡು ಬನ್ನಿ ಎನ್ನಬೇಕೆ?'

ಮೊದಲೇ ಆತಂಕದಲ್ಲಿದ್ದ ಮಗನಿಗೆ ತಂತ್ರಜ್ಞರ ಮಾತು ಕೇಳಿ ರೋಸಿ ಹೋಯಿತು. ಆದರೆ ಬೇರೆ ದಾರಿಯೇ ಇರಲಿಲ್ಲ. ಅಪ್ಪನನ್ನು ಪುನಃ ಊರಿಗೆ ಕರೆದೊಯ್ದು ಮರುದಿನ ತಲೆಗೂದಲು ಸ್ವಚ್ಛಗೊಳಿಸಿಕೊಂಡು ಬಂದ ಮೇಲೆಯೇ ಪರೀಕ್ಷೆ ಮಾಡಿದ್ದು. ಆ ತಪಾಸಣೆಗೆ ಮೊದಲಿನ ತಯಾರಿಯ ಬಗ್ಗೆ ಅರಿವಿಲ್ಲದೆ ಸಾಕಷ್ಟು ವ್ಯಥೆ ಪಡುವಂತಾಯಿತು.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಮಧುಮೇಹ, ರಕ್ತದೊತ್ತಡ, ಸ್ಥೂಲಕಾಯ ಮೊದಲಾದ ಜೀವನಶೈಲಿ ಕಾಯಿಲೆಗಳು ವೈದ್ಯರ ಸಲಹೆಗಾಗಿ ಬರುವವರ ಸಂಖ್ಯೆಯನ್ನು ಹೆಚ್ಚಿಸಿವೆ. ಹೀಗೆ ಸಮಾಲೋಚನೆಗೆ ಬಂದವರಿಗೆ ವೈದ್ಯರು ಪ್ರಯೋಗಾಲಯದ ಕೆಲವು ಪರೀಕ್ಷೆಗಳನ್ನು ಸೂಚಿಸುವುದಿದೆ. ಇನ್ನು ಕೆಲವರು ವರ್ಷಕ್ಕೊಮ್ಮೆ ಸಂಪೂರ್ಣ ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಳ್ಳುವ ರೂಢಿ ಮಾಡಿಕೊಂಡಿರುತ್ತಾರೆ. ಅಷ್ಟೇ ಅಲ್ಲ, ಆರೋಗ್ಯ ವಿಮೆ, ಜೀವವಿಮೆ ಮಾಡುವ ಮೊದಲು ವಿಮಾ ಕಂಪನಿಗಳು ವ್ಯಕ್ತಿಯ ಆರೋಗ್ಯ ತಪಾಸಣೆಯನ್ನು ಬಯಸುವುದಿದೆ. ಗರ್ಭಿಣಿಯರು ಸ್ತ್ರೀರೋಗ ತಜ್ಞರಲ್ಲಿ ಹೋದಾಗ ಮುಂದಿನ ಸುಖ ಪ್ರಸವಕ್ಕಾಗಿ ಕೆಲವು ಪ್ರಯೋಗಾಲಯ ಪರೀಕ್ಷೆಗಳನ್ನು ಕೇಳುವುದಿದೆ. ಈ ಎಲ್ಲ ಸಂದರ್ಭಗಳಲ್ಲಿ ಪ್ರಯೋಗಾಲಯದ ತಪಾಸಣೆಯ ಮುಂಚಿನ ತಯಾರಿಯ ಬಗ್ಗೆ ಕೆಲವು ಅಂಶಗಳನ್ನು ಮೊದಲೇ ತಿಳಿದಿದ್ದರೆ ಅನಗತ್ಯ ಗೊಂದಲವನ್ನೂ ಮತ್ತು ಸಮಯ ವ್ಯರ್ಥವಾಗುವುದನ್ನೂ ತಪ್ಪಿಸಬಹುದು.

## ಕೆಲವು ಮುಖ್ಯ ಪರೀಕ್ಷೆಗಳು

### ಖಾಲಿ ಹೊಟ್ಟೆಯಲ್ಲಿ ರಕ್ತದ ಸಕ್ಕರೆ ಅಂಶ (ಎಫ್‌ಬಿಎಸ್)

ಮಧುಮೇಹದ ಪತ್ತೆಗಾಗಿ ಮತ್ತು ಅದು ನಿಯಂತ್ರಣದಲ್ಲಿದೆಯೇ ಎಂದು ಪರಿಶೀಲಿಸಲು ವೈದ್ಯರು ಸೂಚಿಸುವ ಸರ್ವೇಸಾಮಾನ್ಯ ಪರೀಕ್ಷೆ